# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 133 |
| ಸದಸ್ಯರ ಹೆಸರು | : | ಡಾ:ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 17.08.2026 (ಸಮಾಜ ಕಲ್ಯಾಣ ಇಲಾಖೆಯಿಂದ ವರ್ಗಾವಣೆಯಾದ ಪ್ರಶ್ನೆ) |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಅನಿಷ್ಟ ಪದ್ಧತಿ ಜೀತಪದ್ಧತಿ ಇನ್ನೂ ಜೀವಂತವಾಗಿದೆಯೇ; ಇತ್ತೀಚೆಗೆ ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕಿನ ಸೋಸಲೆ ಹೋಬಳಿ ಬೇವಿನಹಳ್ಳಿ ಗ್ರಾಮ ಹೊರವಲಯದ ಇಟ್ಟಿಗೆ ಫ್ಯಾಕ್ಟರಿಯಲ್ಲಿ ಜೀತಗಿದ್ದ ಬಾಲಕರು ಸೇರಿ 18 ಮಂದಿಯನ್ನು ಜೀತದಿಂದ ರಕ್ಷಣೆ ಮಾಡಿದ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನ ಸೋಸಲೆ ಹೋಬಳಿಯ ಬೇವಿನಹಳ್ಳಿ ಗ್ರಾಮದಲ್ಲಿ ಇಟ್ಟಿಗೆ ಗೂಡಿನಲ್ಲಿ ದಿನಾಂಕ:22.06.2026 ರಂದು ಕೆಲಸ ನಿರ್ವಹಿಸುತ್ತಿದ್ದ 17 ಜನ ವಯಸ್ಕರು ಮತ್ತು ಒಬ್ಬ ಬಾಲಕ ಸೇರಿದಂತೆ ಒಟ್ಟು 18 ಜನರನ್ನು ರಕ್ಷಣೆ ಮಾಡಲಾಗಿರುತ್ತದೆ.<br><br>18 ಜೀತ ಕಾರ್ಮಿಕರಿಗೆ ನಿಯಮಾನುಸಾರ ಬಿಡುಗಡೆ ಪ್ರಮಾಣ ಪತ್ರವನ್ನು ವಿತರಿಸಿ ಅವರ ಸ್ವಂತ ಸ್ಥಳಗಳಿಗೆ ಕಳುಹಿಸಿಕೊಡಲಾಗಿದೆ. ಇಟ್ಟಿಗೆ ಗೂಡಿನ ಮಾಲೀಕರ ವಿರುದ್ಧ ಟಿ.ನರಸೀಪುರ ತಾಲ್ಲೂಕಿನ ಬನ್ನೂರು ಪೋಲಿಸ್ ಠಾಣೆಯಲ್ಲಿ ಪ್ರಕರಣವು ದಾಖಲಾಗಿರುವುದಾಗಿ ಮೈಸೂರು ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ವರದಿಸಿರುತ್ತಾರೆ.<br><br>(ಪ್ರಕರಣ ಸಂಖ್ಯೆ 0165/2026, ದಿನಾಂಕ: 22.06.2026) |
| (ಆ) | ಕಳೆದ ಮೂರು ವರ್ಷಗಳಲ್ಲಿ ಜೀತದಿಂದ ಮುಕ್ತಗೊಂಡಿರುವವ ಸಂಖ್ಯೆಗಳೆಷ್ಟು; ಯಾವ ಜಿಲ್ಲೆಗಳಲ್ಲಿ ಹೆಚ್ಚು ಜೀತ ಪ್ರಕರಣಗಳು ಬೆಳಕಿಗೆ ಬಂದಿವೆ; | 2024-25 ನೇ ಸಾಲಿನಿಂದ 2026-27 (ಈ ತಹಲ್) ವರೆಗೂ 179 ಜೀತ ಕಾರ್ಮಿಕರನ್ನು ರಕ್ಷಿಸಿ ಬಿಡುಗಡೆಗೊಳಿಸಲಾಗಿರುತ್ತದೆ.<br><br>2024-25 ನೇ ಸಾಲಿನಲ್ಲಿ 14 ಜೀತ ಕಾರ್ಮಿಕರನ್ನು ಬಿಡುಗಡೆಗೊಳಿಸಲಾಗಿದೆ.<br><br>2025-26 ನೇ ಸಾಲಿನಲ್ಲಿ 97 ಜೀತ ಕಾರ್ಮಿಕರನ್ನು ಬಿಡುಗಡೆಗೊಳಿಸಲಾಗಿದೆ.<br><br>2026-27ನೇ ಸಾಲಿನಲ್ಲಿ ಈ ತಹಲ್ ವರೆಗೂ 68 ಜೀತ ಕಾರ್ಮಿಕರನ್ನುಬಿಡುಗಡೆಗೊಳಿಸಿದೆ.<br><br>2024-25 ನೇ ಸಾಲಿನಿಂದ 2026-27 ನೇ ಸಾಲಿನ ಈ ತಹಲ್ ವರೆಗೂ ಪತ್ತೆಯಾಗಿ ಬಿಡುಗಡೆಯಾಗಿರುವ ಪ್ರಕರಣಗಳಲ್ಲಿ ಅತೀ ಹೆಚ್ಚು ಜೀತ ಕಾರ್ಮಿಕ ಪ್ರಕರಣಗಳು ಪತ್ತೆಯಾಗಿರುವ ಜಿಲ್ಲೆಗಳು-<br><br>ಬಾಗಲಕೋಟೆ (53), ವಿಜಯನಗರ(38), ಚಾಮರಾಜನಗರ(32), ಮೈಸೂರು(22), ತುಮಕೂರು(14), ಬೆಂಗಳೂರು ನಗರ(9), ಹಾಸನ(4), ಮಂಡ್ಯ(3), |

| | | |
|---|---|---|
| | | ಚಿಕ್ಕಬಳ್ಳಾಪುರ(2),ಕಲಬುರಗಿ(2) |
| (ಇ) | ಜೀತಕ್ಕಿಟ್ಟುಕೊಂಡವರ ವಿರುದ್ಧ ಕೈಗೊಂಡ ಕ್ರಮಗಳೇನು; ಗುಲಾಮಗಿರಿ ಸಂಕೇತ –ಅನಿಷ್ಟ ಜೀತ ಪದ್ಧತಿ ತಡೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳು ಮತ್ತು ಪುನರ್ ವಸತಿ ಕಾರ್ಯಗಳೇನು? | ಜೀತ ಕಾರ್ಮಿಕ ಪದ್ಧತಿ (ರದ್ಧತಿ) ಕಾಯ್ದೆ, 1976 ಕಲಂ 22 ರನ್ವಯ ಜೀತಕ್ಕಾಗಿ ವ್ಯಕ್ತಿಯನ್ನು ದುಡಿಸಿಕೊಳ್ಳುವುದು ಸಂಜ್ಞೇಯ ಅಪರಾಧವೆಂದು ತಿಳಿಸಲಾಗಿದೆ.<br><br>ಎಲ್ಲಾ ಸಂಜ್ಞೇಯ ಅಪರಾಧಗಳಲ್ಲಿ FIR ನ್ನು ಕಡ್ಡಾಯಪಡಿಸಲಾಗಿರುತ್ತದೆ. ಅದರಂತೆ, ವರದಿಯಾಗುವ ಎಲ್ಲಾ ಜೀತ ಕಾರ್ಮಿಕ ಪ್ರಕರಣಗಳಲ್ಲೂ ಆರೋಪಿಗಳ ವಿರುದ್ಧ FIR ದಾಖಲಿಸುವುದನ್ನು ಕಡ್ಡಾಯಗೊಳಿಸಲಾಗಿರುತ್ತದೆ. ಜೀತ ಕಾರ್ಮಿಕ ಆಚರಣೆಯನ್ನು ಒತ್ತಾಯಿಸುವ ಅಪರಾಧಿಗಳಿಗೆ ಜೀತ ಕಾರ್ಮಿಕ ಪದ್ಧತಿ(ರದ್ಧತಿ) ಕಾಯ್ದೆ 1976 ಕಲಂ 16 ರಿಂದ 20 ರವರೆಗೆ ಸೂಚಿಸಿರುವಂತೆ ಕಾರಾಗೃಹ ವಾಸ ಮತ್ತು ಜುಲ್ಮಾನೆ ವಿಧಿಸಲು ಅವಕಾಶವಿರುತ್ತದೆ.<br><br>ಜೀತ ಕಾರ್ಮಿಕ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು 2024-25ನೇ ಸಾಲಿನ ಆಯವ್ಯಯ ಘೋಷಣೆಯಂತೆ ಜೀತ ಕಾರ್ಮಿಕ ಪದ್ಧತಿ ನಿಷೇಧ ಅಧಿಕಾರಿಗಳನ್ನು ಸರ್ಕಾರವು ನೇಮಕ ಮಾಡಿ ರಾಜ್ಯ ಪತ್ರದಲ್ಲಿ ದಿನಾಂಕ: 28.10.2024 ರಂದು ಅಧಿಸೂಚನೆ ಹೊರಡಿಸಿದೆ. 15 ಇಲಾಖೆಗಳ 40 ಪ್ರಾಧಿಕಾರಗಳನ್ನು ಜೀತ ಕಾರ್ಮಿಕ ಪದ್ಧತಿ ನಿಷೇಧ ಅಧಿಕಾರಿಗಳೆಂದು ನೇಮಿಸಲಾಗಿದೆ. ಈ ಪ್ರಾಧಿಕಾರಗಳು ಜೀತ ಕಾರ್ಮಿಕ ಪ್ರಕರಣಗಳನ್ನು ವರದಿ ಮಾಡಲು ಹಾಗೂ ಜೀತ ವಿಮುಕ್ತರಿಗೆ ಪುನರ್ವಸತಿ ಸೌಲಭ್ಯ ನೀಡುವ ನಿಟ್ಟಿನಲ್ಲಿ ಪ್ರಮುಖವಾದ ಪೂರಕ ಕ್ರಮವಾಗಿದೆ.<br><br>ರಾಜ್ಯ ಮಟ್ಟದಲ್ಲಿ ಜೀತ ವಿಮುಕ್ತರ ಪುನವರ್ಸತಿ ಅನುಷ್ಠಾನ ಹಾಗೂ ಜೀತ ಕಾರ್ಮಿಕ ಪದ್ಧತಿ ಅಸ್ತಿತ್ವದ ಕುರಿತು ಅವಲೋಕಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ಇದ್ದು, ಕಂದಾಯ, ಒಳಾಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಾರ್ಮಿಕ ಇಲಾಖೆಗಳಂತಹ ಪ್ರಮುಖ ಇಲಾಖೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳು ಈ ಸಮಿತಿಯ ಸದಸ್ಯರಾಗಿರುತ್ತಾರೆ.<br><br>ಜೀತ ಕಾರ್ಮಿಕ ಪದ್ಧತಿ (ರ) ಕಾಯ್ದೆ, ಕಲಂ 13(1) & 13(2) ರನ್ವಯ ಜಿಲ್ಲಾ ಹಾಗೂ ಉಪ ವಿಭಾಗ ಮಟ್ಟದಲ್ಲಿ ಜಾಗೃತ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳು ಜೀತ ಕಾರ್ಮಿಕ ಪದ್ಧತಿ ನಿರ್ಮೂಲನೆ, ಜೀತ ವಿಮುಕ್ತರ ಪುನರ್ ವಸತಿ ಕುರಿತು ಕ್ರಮ ವಹಿಸುತ್ತದೆ.<br><br>ಜೀತ ಕಾರ್ಮಿಕ ಪ್ರಕರಣಗಳು – ಕೃಷಿ, ಕಟ್ಟಡ, ಜವಳಿ ಸೇರಿದಂತೆ ವಿವಿಧ ಉದ್ಯಮಗಳಲ್ಲಿ ಪತ್ತೆಯಾಗುತ್ತಿದ್ದು, ಇದನ್ನು ತ್ವರಿತವಾಗಿ ಪತ್ತೆ ಮಾಡಲು ಹಾಗೂ ಈ ಕ್ಷೇತ್ರಗಳಲ್ಲಿ ಜೀತ ಕಾರ್ಮಿಕ ಪದ್ಧತಿಯನ್ನು ತಡೆಗಟ್ಟಲು ಸರ್ಕಾರವು ಆದೇಶ ಸಂಖ್ಯೆ: RDPR/589/GPA/2026(E), ಬೆಂಗಳೂರು, ದಿನಾಂಕ: 03.07.2026 ರಲ್ಲಿ ವಿಶೇಷ ಕಾರ್ಯಪಡೆ (Special Task Force) ನ್ನು ರಚಿಸಿ ಆದೇಶಿಸಿದೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: KPRC-ADM20RBL/13/2020/DD2, ದಿನಾಂಕ:06.07.2021 ರಲ್ಲಿ ಜೀತ |

| | | |
|---|---|---|
| | | ಕಾರ್ಮಿಕ ಪದ್ಧತಿ ನಿರ್ಮೂಲನಾ ದಿನಾಚರಣೆಯನ್ನು ಎಲ್ಲಾ ಸರ್ಕಾರಿ ಕಛೇರಿ ಹಾಗೂ ಸಾರ್ವಜನಿಕ ಸ್ಥಳದಲ್ಲಿ ಆಚರಿಸುವ ಮೂಲಕ ಪದ್ಧತಿ ನಿರ್ಮೂಲನೆಗೆ ಕ್ರಮ ವಹಿಸಲಾಗಿದೆ.<br><br>ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು ದಿನಾಂಕ:18.05.2016 ಮತ್ತು 07.02.2022 ರ ಮಾರ್ಗಸೂಚಿಯಲ್ಲಿ ಸೂಚಿಸಿರುವಂತೆ ಎಲ್ಲಾ ಜಿಲ್ಲಾಧಿಕಾರಿಗಳ ಅಧೀನದಲ್ಲಿ ತುರ್ತು ಪರಿಹಾರ ನಿಧಿ (Corpus Fund) ಸ್ಥಾಪಿಸಲಾಗಿರುತ್ತದೆ. ಈ ನಿಧಿಯಿಂದ ಬಿಡುಗಡೆ ಹೊಂದಿದ ಪ್ರತಿ ಜೀತ ವಿಮುಕ್ತನಿಗೆ ತಲಾ ದರ ರೂ.30,000/- ಗಳ ಪರಿಹಾರವನ್ನು ಒದಗಿಸಲಾಗುವುದು.<br><br>ಸರ್ಕಾರದ ಆದೇಶ ಸಂಖ್ಯೆ:ADM20RBL/05/2024-DD2-1387909, ಬೆಂಗಳೂರು, ದಿನಾಂಕ:07.06.2024 ರಲ್ಲಿ ಕರ್ನಾಟಕ ರಾಜ್ಯಕ್ಕೆ ಸೇರಿದ ಜೀತ ವಿಮುಕ್ತರಿಗೆ ತಿಂಗಳಿಗೆ ತಲಾ ರೂ.1000/- ರಂತೆ ನೀಡಲಾಗುವ 24 ತಿಂಗಳುಗಳ ಮಾಸಾಶನ ಅನುದಾನವನ್ನು ತಿಂಗಳಿಗೆ ರೂ.1000/- ದಿಂದ ರೂ. 2000/-ಕ್ಕೆ ಹೆಚ್ಚಿಸಿ ಪರಿಷ್ಕರಿಸಿದೆ.<br><br>ಜೀತ ಕಾರ್ಮಿಕ ಪದ್ಧತಿಯನ್ನು ತಡೆಗಟ್ಟಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮಾದರಿಯಲ್ಲೇ ರಾಜ್ಯ ಮಟ್ಟದ ಮಾದರಿ ಕಾರ್ಯವಿಧಾನವನ್ನು ರಚಿಸಿ, ಎಲ್ಲಾ ಕ್ಷೇತ್ರ ಮಟ್ಟದ ಅಧಿಕಾರಿಗಳಿಗೆ ಈ ಕುರಿತು ಮಾಹಿತಿ ತರಬೇತಿಯನ್ನು ನೀಡಿರುತ್ತದೆ.<br><br>ಸರ್ಕಾರದ ಸುತ್ತೋಲೆ ಸಂಖ್ಯೆ: KPRC/ ADM20RBL/8/ 2020/DD2, ಬೆಂಗಳೂರು, ದಿನಾಂಕ: 23.11.2020 ರನ್ವಯ ಪುನರ್ ವಸತಿ ಸೌಲಭ್ಯಗಳಾದ- ನಿವೇಶನ, ವಸತಿ, ಪಡಿತರ ಚೀಟಿ, ಗುರುತಿನ ದಾಖಲಾತಿಗಳು, ಆರೋಗ್ಯ ಚೀಟಿ, ಶಿಕ್ಷಣ ವ್ಯವಸ್ಥೆ, ಕೌಶಲ್ಯ ತರಬೇತಿಗಳನ್ನು ಒದಗಿಸಲು ಕ್ರಮ ವಹಿಸುತ್ತಿದೆ. |

ಸಂಖ್ಯೆ: ಗ್ರಾಅಪ 761 ಗ್ರಾಪಂಅ 2026

(ಈಶ್ವರ ಬಿ. ಖಂಡ್ರೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.